ಚುಟುಕು ಸುದ್ದಿ

ಸರ್ವಕಾಲಕ್ಕೂ ಜನಜನಿತ ರಾಮನಾಮ ಚರಿತ

ದೇವನಹಳ್ಳಿ: ಭಾರತ ಎಂದರೇ ಅದು ದೇವಭೂಮಿ. ಹಲವಾರು ಪುಣ್ಯಕ್ಷೇತ್ರಗಳು, ಸಾಧು-ಸಂತರು ನೆಲೆ ನಿಂತಿರುವ ಭೂಮಿ. ಇಂತಹ ಭೂಮಿಯಲ್ಲಿ 2 ಮಹಾಕಾವ್ಯಗಳು ಇಂದಿಗೂ ಜನಜನಿತ. ಅವುಗಳೆಂದರೆ ರಾಮಾಯಣ ಮತ್ತು ಮಹಾಭಾರತ ಎಂದು ಬಿಜೆಪಿ ಜಿಲ್ಲಾ ಅಸಂಘಟಿತ ಕಾರ್ಮಿಕ ಪ್ರಕೋಷ್ಠದ ಸಂಚಾಲಕ ಅಂಬರೀಶ್‌ಗೌಡ ಮಾತನಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು 500 ವರ್ಷಗಳ ಹೋರಾಟದ ಫಲ ಫೆ.22ರಂದು ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆಗೊಳ್ಳುತ್ತಿರುವುದು ನಮಗೆಲ್ಲರಿಗೂ ಸಂತಸವನ್ನು ತಂದುಕೊಟ್ಟಿದೆ. ಭಾರತದ ಕನಸು ಪ್ರಧಾನಿ ನರೇಂದ್ರಮೋದಿ ಅವರ ನೇತೃತ್ವದಲ್ಲಿ ನನಸಾಗುತ್ತಿದೆ. ಶ್ರೀರಾಮನ ಜನ್ಮಭೂಮಿಯಲ್ಲಿ ಭವ್ಯ ರಾಮ ಮಂದಿರ ನಿರ್ಮಾಣವಾಗಿದ್ದು, ಕರ್ನಾಟಕದ ಮೈಸೂರಿನ ಶಿಲ್ಪಿ ಅರುಣ್ ಯೋಗಿ ರಾಜ್ ಕೆತ್ತನೆಯ ಸುಂದರ ರಾಮನ ವಿಗ್ರಹ ತಯಾರು ಮಾಡಿದ್ದಾರೆ. ಸರ್ವಕಾಲಕ್ಕೂ ಜನಜನಿತ ರಾಮನಾಮ ಚರಿತ ಎಲ್ಲಡೆ ಪಸರಿಸಲಿ ಎಂದು ಶುಭಹಾರೈಸಿದರು.

ಶಾರ್ಟ್ ಸರ್ಕ್ಯೂಟ್‌ನಿಂದ ಜಿಮ್‌ನಲ್ಲಿ ಬೆಂಕಿ ಅವಘಡ

ಆನೇಕಲ್: ತಾಲೂಕಿನ ಮರಸೂರು ಸಮೀಪದ ಖಾಸಗಿ ಜಿಮ್‌ನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಅವಘಡ ಸಂಭವಿಸಿದ್ದು ಅದೃಷ್ಟವಷತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಆನೇಕಲ್ ಚಂದಾಪುರ ಮುಖ್ಯ ರಸ್ತೆಯ ಮೈಸೂರು ಸಮೀಪದ ಕ್ರಾಸ್ ಪಿಟ್ ಜಿಮ್ನಲ್ಲಿ ಗುರುವಾರ ರಾತ್ರಿ ಬೆಂಕಿ ಕಾಣಿಸಿಕೊಂಡಿದ್ದು, ರಾತ್ರಿ ಸಮಯದಲ್ಲಿ ಆದ್ದರಿಂದ ಯಾವುದೇ ಪ್ರಾಣ ಹಾನಿ ಹಾಗೂ ಹೆಚ್ಚು ನಷ್ಟವು ಸಂಭವಿಸಿಲ್ಲ ಎಂದು ತಿಳಿದುಬಂದಿದೆ. ಬೆಂಕಿಯನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಆಗಮಿಸಿ ನಂದಿಸುವಲ್ಲಿ ಯಶಸ್ವಿಯಾದರು.

ಸಂಚಾರ ಸುರಕ್ಷತೆ ಅರಿವು ಅಗತ್ಯ

ವಿಜಯಪುರ: ವಾಹನ ಚಾಲಕರು ಮತ್ತು ಪಾದಚಾರಿಗಳು ರಸ್ತೆ ಸುರಕ್ಷತೆ ಬಗ್ಗೆ ಉತ್ತಮ ಶಿಸ್ತು ಮತ್ತು ಜ್ಞಾನ ಬೆಳೆಸಿಕೊಳ್ಳಬೇಕು. ಶಿಸ್ತಿನ ಸಂಚಾರ, ಸುಗಮ ಸಂಚಾರಕ್ಕೆ ಹಾದಿ ಅರಿಯಬೇಕೆಂದು ಎಂದು ವಿಜಯಪುರ ಪೋಲಿಸ್ ಠಾಣೆಯ ಪಿ.ಎಸ್.ಐ ಸುನೀಲಕುಮಾರ್ ಹೇಳಿದರು..

ವಿಜಯಪುರದ ಪ್ರಗತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜಯಪುರ ಪೋಲೀಸ್ ಠಾಣೆ ಹಾಗೂ ನೆಹರು ಯುವ ಕೇಂದ್ರ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಸಹಯೋಗದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಅಭಿಯಾನ – 2024 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜನಸಾಮಾನ್ಯರಲ್ಲಿ ರಸ್ತೆ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸುವುದು ಅಭಿಮಾನದ ಉದ್ದೇಶ ಎಂದರು.

ಪ್ರಾಂಶುಪಾಲರಾದ ಡಾ. ನಾಗರಾಜ್ ಮಾತನಾಡಿ ಯುವಕರು ಜೀವ – ಜೀವನ ಇವೆರಡನ್ನೂ ವೇಗವಾಗಿ ವಾಹನ ಚಲಾಯಿಸಿ ಅಪಾಯಕ್ಕೆ ಒಳಗಾಗಬಾರದು, ರಸ್ತೆ ನಿಯಮಕಡ್ಡಾಯ ಪಾಲಿಸಬೇಕೆಂದರು. ವಿಜಯಪುರ ಪೋಲಿಸ್ ಸಿಬ್ಬಂದಿ ವರ್ಗ, ನೆಹರು ಯುವ ಕೇಂದ್ರದ ಅಧಿಕಾರಿಗಳು ಇದ್ದರು.

ಶರಣರು ಮನುಕುಲದ ಆಸ್ತಿ | ನಮ್ಮ ಸರ್ಕಾರ ಬಡವರ ಪರ : ಸಿಎಂ

ಶ್ರೀ ವೇಮನರು ವಿಶ್ವಮಾನವರು

ಬೆಂಗಳೂರು: ಬಸವಣ್ಣ, ಕನಕದಾಸ, ಅಂಬೇಡ್ಕರ್, ವೇಮನರು ಒಂದು ಜಾತಿಗೆ ಸೀಮಿತರಾದವರಲ್ಲ. ವಿಶ್ವಮಾನವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ ಶ್ರೀಮಹಾಯೋಗಿ ವೇಮನ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ವೇಮನರಾದಿಯಾಗಿ ಬಸವಾದಿ ಶರಣರು ಮನುಕುಲದ ಆಸ್ತಿ. ಪ್ರತಿ ಮಗುವೂ ಹುಟ್ಟುತ್ತಾ ವಿಶ್ವಮಾನವ. ಬೆಳೆಯುತ್ತಾ ಅಲ್ಪಮಾನವರಾಗಿ ಬಿಡುತ್ತಾರೆಂದು ಕುವೆಂಪು ಹೇಳಿರುವ ಮಾತು ಸತ್ಯ. ವೇಮನ ಅವರು ಆಕಸ್ಮಿಕವಾಗಿ ರೆಡ್ಡಿ ಸಮುದಾಯದಲ್ಲಿ ಹುಟ್ಟಿದ್ದರೂ ಅವರು ಇಡಿ ಮನುಕುಲಕ್ಕೆ ಬೇಕಾದವರಾಗಿದ್ದರು ಎಂದರು.

ಶಿಕ್ಷಣ ಕಲಿತು ನಾವು ಮೌಢ್ಯ ಆಚರಿಸಬಾರದು. ಶಿಕ್ಷಣದ ಬೆಳಕಿನಿಂದ ನಾವು ಮೌಢ್ಯದಿಂದ ಹೊರಬರಬೇಕು. ರೆಡ್ಡಿ ಜನ ಸಂಘದ ಶಿಕ್ಷಣ ಸಂಸ್ಥೆಗೆ ಜಮೀನು ಒದಗಿಸಲು ಸರ್ಕಾರ ಸಿದ್ಧವಿದೆ. ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಪುತ್ಥಳಿಯನ್ನು ವಿಧಾನಸೌಧದಲ್ಲಿ ನಿರ್ಮಿಸಲು ಅವಕಾಶ ಕಲ್ಪಿಸಿದ್ದು ನಮ್ಮ ಅವಧಿಯಲ್ಲೇ ಎಂದು ತಿಳಿಸಿದರು. ಜನಪದ ತಜ್ಞೆ ಡಾ.ಕೆ.ಆರ್.ಸಂಧ್ಯಾರೆಡ್ಡಿ ವಿಶೇಷ ಉಪನ್ಯಾಸ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕರ್ನಾಟಕ ರೆಡ್ಡಿ ಜನಸಂಘದ ಅಧ್ಯಕ್ಷ ಎಸ್.ಜಯರಾಮರೆಡ್ಡಿ, ಗಂಗಾವತಿ ಶಾಸಕ ಜನಾರ್ದನರೆಡ್ಡಿ, ಮಾಜಿ ಸಚಿವ ಎಚ್.ಎಂ.ರೇವಣ್ಣ ಮತ್ತಿತರರಿದ್ದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ ಶ್ರೀಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಕರ್ನಾಟಕ ರೆಡ್ಡಿ ಜನಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಚಿವರಾದ ರಾಮಲಿಂಗಾರೆಡ್ಡಿ, ಶಿವರಾಜ್ ತಂಗಡಗಿ, ಕರ್ನಾಟಕ ರೆಡ್ಡಿ ಜನಸಂಘದ ಅಧ್ಯಕ್ಷ ಎಸ್.ಜಯರಾಮರೆಡ್ಡಿ ಮತ್ತಿತರರಿದ್ದರು.

> **ಜಯಂತಿ ಆಚರಣೆ**
>
> ನಾನು ಮೊದಲ ಬಾರಿ ಮುಖ್ಯಮಂತ್ರಿ ಆದಾಗ ಸರ್ಕಾರದಿಂದ ವೇಮನ ಜಯಂತಿ ಆಚರಿಸಲು ಆದೇಶಿಸಿದ್ದೆ. ನಮ್ಮ ಸರ್ಕಾರ ಎಲ್ಲಾ ಜಾತಿ ಮತ್ತು ಧರ್ಮದ ಬಡವರ ಪರವಾಗಿ ಇರುತ್ತದೆ. ಎಲ್ಲಾ ಜಾತಿಯ ಬಡವರು ಮತ್ತು ಮಧ್ಯಮ ವರ್ಗದವರ ಪರವಾಗಿ ನಮ್ಮ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಿದೆ-ಜಾರಿಗೆ ತರುತ್ತಿದೆ.
>
> ▪ಸಿದ್ದರಾಮಯ್ಯ, | ಮುಖ್ಯಮಂತ್ರಿ

ಡೇರಿ ನಿರ್ದೇಶಕರಿಗೆ ಅಭಿನಂದನೆ

ಚನ್ನಪಟ್ಟಣ: ತಾಲ್ಲೂಕಿನ ಬಿ.ವಿ.ಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ನಿರ್ದೇಶಕರಾಗಿ ಹನ್ನೆರಡು ಮಂದಿ ಚುನಾಯಿತರಾಗಿದ್ದು, ಸದಸ್ಯರು ಆಯ್ಕೆಯಾದವರನ್ನು ಅಭಿನಂದಿಸಿದರು.

ಸಂಘದ ಆವರಣದಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಎದುರಾಳಿ ಅಭ್ಯರ್ಥಿಗಳಿಗಿಂತ ಹೆಚ್ಚು ಮತ ಪಡೆದ ಕುಮಾರ ಬಿ.ವಿ, ಕುಳ್ಳೇಗೌಡ, ಕೃಷ್ಣೇಗೌಡ ಬಿ.ಪಿ, ನಾಗಣ್ಣ, ಶ್ರೀನಿವಾಸ, ದೇವರಾಜು, ನಾಗರಾಜು ಬಿ.ಸಿ, ದೊಡ್ಡಯ್ಯ, ದೊಡ್ಡನಿಂಗಮ್ಮ, ಸುಜಾತ, ಕುಮಾರ ಹಾಗೂ ಕೃಷ್ಣೇಗೌಡ ಚುನಾಯಿತರಾಗಿದ್ದು, ಪರಿಶಿಷ್ಟ ಪಂಗಡ ಮೀಸಲು ಸ್ಥಾನ ಖಾಲಿ ಇದೆ ಎಂದು ಚುನಾವಣಾಧಿಕಾರಿ ಎಸ್.ಪುರುಷೋತ್ತಮ ಪ್ರಕಟಿಸಿದರು.

ಗ್ರಾಮದ ಮುಖಂಡರಾದ ಡೇರಿ ಮಾಜಿ ಅಧ್ಯಕ್ಷ ಬಿ.ಪಿ.ಲೋಕೇಶ್, ಬಿ.ಕೆ.ಲೋಕೇಶ್, ಬಿ.ಜೆ.ಲೋಕೇಶ್, ಬಿ.ಟಿ.ಶಿವಮಲ್ಲೇಗೌಡ, ಯದುನಂದನ್, ಬಿ.ಎಂ.ಮಲ್ಲೇಶ್, ಬಿ.ಸಿ.ಪ್ರಕಾಶ್, ಬಿ.ಜಿ.ರಾಘವೇಂದ್ರ, ವಿ.ರಾಜು, ಗ್ರಾಪಂ ಮಾಜಿ ಸದಸ್ಯ ದೊಡ್ಡೇಗೌಡ, ಮಹೇಶ್ ಹಾಗೂ ಗ್ರಾಮದ ಪ್ರಮುಖರು ಡೇರಿ ನೂತನ ನಿರ್ದೇಶಕರನ್ನು ಅಭಿನಂದಿಸಿದರು.

ಸಕಲರಿಗೂ ಅನ್ನ ನೀಡುವ ಕೃಷಿಕ

ಸೂಲಿಬೆಲೆ: ಸಕಲ ಜೀವರಾಶಿಗಳಿಗೂ ಅನ್ನ ನೀಡುವ ದೇವರು ಕೃಷಿಕ. ಇವರಿಗೆ ಸಾಮಾಜಿಕ ಗೌರವ ಸ್ಥಾನಮಾನ ವಿಭಿನ್ನವಾಗಿದೆ ಎಂದು ಅಕ್ಷಯ ಪಾತ್ರ ಫೌಂಡೇಷನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ವೆಂಕಟ್ ಹೇಳಿದರು.

ಸೂಲಿಬೆಲೆಯಲ್ಲಿ ಅಕ್ಷಯ ಪಾತ್ರ ಫೌಂಡೇಷನ್ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸುಗ್ಗಿ ಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿ ಹಸಿವು ಮುಕ್ತ ಸಮಾಜ ನಿರ್ಮಾಣ ಮಾಡಲು ನಮ್ಮ ಅಕ್ಷಯ ಪಾತ್ರ ಫೌಂಡೇಷನ್ ಗುಣಮಟ್ಟದ ಆಹಾರ ನೀಡುತ್ತಿದ್ದು ಇದಕ್ಕೆ ಬೆನ್ನಲುಬಾಗಿ ರೈತಾಪಿವರ್ಗದ ಸಹಕಾರ ದೊರೆಯುತ್ತಿದೆ ಎಂದರು. ಬೆಂಗಳೂರು ಘಟಕದ ಮುಖ್ಯಸ್ಥ ಜೀವನ್‌ಮುಕ್ತಪ್ರಭು ಮಾತನಾಡಿದರು. ಧವಸದಾನ್ಯಗಳ ರಾಶಿ ಪೂಜೆ ನೆರವೇರಿಸಿದರು, ರೈತಾಪಿ ವರ್ಗಕ್ಕೆ ಸಂಕ್ರಾಂತಿ ಹಬ್ಬದ ಅಂಗವಾಗಿ ಎಳ್ಳುಬೆಲ್ಲ ನೀಡಿ,ಗೌರವ ಕಾಣಿಕೆ ನೀಡಿ ಗೌರವಿಸಿದರು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

‘ಅನಂತ ಕುಮಾರ್ ಹೆಗಡೆ ಹೇಳಿಕೆ ಅಸಭ್ಯತನ ಇಲ್ಲ’

ಸಂ.ಕ.ಸಮಾಚಾರ, ದೊಡ್ಡಬಳ್ಳಾಪುರ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಂಸದ ಅನಂತ ಕುಮಾರ್ ಹೆಗಡೆ ಹೇಳಿಕೆಯಲ್ಲಿ ಅಸಭ್ಯತನ ಇಲ್ಲ ಎಂದು ಕದಂಬ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ಜಿ.ಎನ್.ಪ್ರದೀಪ್ ಹೇಳಿದರು.

ನಗರದ ಕದಂಬ ಬ್ರಿಗೇಡ್ ವತಿಯಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಸಿದ್ದರಾಮಯ್ಯ ಸಹ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಕೀಳಾಗಿ ಹಾಗೂ ಏಕವಚನದಲ್ಲಿ ಮಾತನಾಡಿದ್ದಾರೆ. ಗಾಜಿನ ಮನೆಯಲ್ಲಿ ನಿಂತು ಕಲ್ಲು ಹೊಡೆಯುತ್ತಿರುವ ಕಾಂಗ್ರೆಸ್ಸಿಗರಿಗೆ ಅನಂತಕುಮಾರ್ ಹೆಗಡೆ ಅವರ ಹೇಳಿಕೆ ಬಗ್ಗೆ ಪ್ರಶ್ನಿಸುವ ನೈತಿಕತೆ ಇಲ್ಲ. ಸಿಎಂ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಶಾಸಕರು, ಸಚಿವರು ಸರ್ಕಾರದ ನ್ಯೂನತೆಗಳನ್ನು ಮುಚ್ಚಿಕೊಳ್ಳುವ ಹಾಗೂ ಸರ್ಕಾರದ ದಿವಾಳಿತನವನ್ನು ಮರೆಮಾಚುವ ಸಲುವಾಗಿ ಜನರ ಗಮನ ಬೇರೆಡೆಗೆ ಸೆಳೆಯಲು ಈ ರೀತಿಯ ವಿವಾದ ಸೃಷ್ಟಿಸಿದ್ದಾರೆ ಎಂದು ದೂರಿದರು.

ಅನಂತ ಕುಮಾರ್ ಹೆಗಡೆ ಅವರು ಸುಸಂಸ್ಕೃತ, ನೇರ ನಿಷ್ಠುರವಾಗಿ ಮಾತನಾಡುವ ವ್ಯಕ್ತಿ. ಅವರ ಹೇಳಿಕೆಯನ್ನ ವಿವಾದ ಎಂದು ಬಿಂಬಿಸಲಾಗುತ್ತಿದೆ. ಧರ್ಮ, ಸಂಸ್ಕೃತಿಯ ಬಗ್ಗೆ ಮಾತನಾಡಿದರೆ ಅಸಭ್ಯ ಹೇಗಾಗುತ್ತದೆ. ಬಿಜೆಪಿ ಮೌನಕ್ಕೆ ಯತ್ನಾಳ್ ಹೇಳಿಕೆಯ ಅನುಮಾನಗಳು ಸೂಕ್ತವಾಗುವ ಲಕ್ಷಣಗಳಿವೆ ಎಂದರು. ಇದೇ ಸಂದರ್ಭದಲ್ಲಿ ಮುಖಂಡರಾದ ಸಿ ಕೆ ದಯಾನಂದ್, ಸುರೇಶ್ ಬಾಬು, ಕನಕರಾಜು, ಶಿವರಾಜು, ಆಟೋ ರಮೇಶ್ ಹಾಜರಿದ್ದರು.

ಮಾಗಡಿ ಪಟ್ಟಣದ ಪ್ರಮುಖ ಬೀದಿಯಲ್ಲಿ ಗಜಗೌರಿ ಉತ್ಸವದ ಅಂಗವಾಗಿ ಆನೆಯ ಮೇಲೆ ಅಲಂಕೃತ ಗಜಗೌರಿ ಅಮ್ಮನವರ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ವೈಭವದ ಗಜಗೌರಿ ಉತ್ಸವ

ಸಂ.ಕ.ಸಮಾಚಾರ, ಮಾಗಡಿ

ಆರ್ಯವೈಶ್ಯ ಮಹಿಳಾ ಮಂಡಳಿ ವತಿಯಿಂದ ಅದ್ದೂರಿಯಾಗಿ ಗಜಗೌರಿ ಉತ್ಸವ ವೈಭವದಿಂದ ನೆರವೇರಿತು. ಪಟ್ಟಣದ ವಾಸವಿ ದೇವಸ್ಥಾನದಲ್ಲಿ ಮೂರು ದಿನಗಳ ಕಾಲ ಗಜಗೌರಿ ಉತ್ಸವ ವೈಭವದಿಂದ ಜರುಗಿತು. ಉತ್ಸವದ ಅಂಗವಾಗಿ ಅಭಿಷೇಕ, ಅಷ್ಟೋತ್ತರ, ಸಹಸ್ರನಾಮ ಪೂಜೆ, ಶ್ರೀ ಗಜಗೌರಿ ಘನ ಹೋಮ, ಪೂರ್ಣಾವತಿ, ಬಾಗಿನ ಸಮರ್ಪಣೆ ಪ್ರತಿದಿನವೂ ಬಂದಿದ್ದ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಗಜಗೌರಿ ಉತ್ಸವದ ಕೊನೆಯ ದಿನ ಗಜಗೌರಿ ಅಲಂಕೃತ ಗಜ ವಾಹಿನಿ ಗೌರಿ ಮಾತೆಯ ಮೆರವಣಿಗೆಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಆನೆಯ ಮೇಲೆ ಅಲಂಕೃತ ದೇವಿಯನ್ನು ಕೂರಿಸಿ ಪಟ್ಟಣದಲ್ಲಿ ಮೆರವಣಿಗೆ ಮಾಡಿದ್ದು ಉತ್ಸವಕ್ಕೆ ಮತ್ತಷ್ಟು ಮೆರೆಗನ್ನು ನೀಡಿತು. ದೇವಿಯನ್ನು ಪಟ್ಟಣದ ಗುಂಡಯ್ಯನ ಕಲ್ಯಾಣಿಯಲ್ಲಿ ತೆಪ್ಪೋತ್ಸವ ಮಾಡುವ ಮೂಲಕ ಮೂರು ದಿನಗಳ ಕಾಲ ನಡೆದ ಗಜಗೌರಿ ಉತ್ಸವಕ್ಕೆ ಅದ್ದೂರಿಯಾಗಿ ತೆರೆಕಂಡಿತ್ತು. ವಿವಿಧ ಪೂಜಾ ಕೈಂಕಾರ್ಯಗಳ ಮೂಲಕ ಲೋಕಕಲ್ಯಾಣಾರ್ಥವಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ಆರ್ಯವೈಶ್ಯ ಮಹಿಳಾ ಮಂಡಳಿಯ ಅಧ್ಯಕ್ಷರಾದ ಮೀರಾ ಶಿವಕುಮಾರ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮಹಿಳಾ ಮಂಡಳಿಯ ಉಪಾಧ್ಯಕ್ಷರಾದ ಜ್ಯೋತಿ ನಂಜುಂಡಸ್ವಾಮಿ, ಕಾರ್ಯದರ್ಶಿ, ರೂಪರಾಜ್, ಖಜಾಂಚಿ ಆರತಿ ಮದನ್, ನಿರ್ದೇಶಕರಾದ ಉಷಾ ನಾಗರಾಜ್, ವೈಭವಿ ನವೀನ್, ರಾಜಲಕ್ಷ್ಮಿ, ಲಕ್ಷ್ಮೀನಾರಾಯಣ, ಲಕ್ಷ್ಮಿ ಗುಪ್ತ, ಪುರಸಭಾ ಸದಸ್ಯರಾದ ಕೆ.ವಿ.ಬಾಲು ಸೇರಿದಂತೆ ಆರ್ಯವೈಶ್ಯ ಸಮಾಜದ ಮುಖಂಡರುಗಳು ಹಾಗೂ ಇತರರು ಭಾಗವಹಿಸಿದ್ದರು.

ಕೂಲಿಕಾರರ ಮಕ್ಕಳಿಗಾಗಿ ಕೂಸಿನ ಮನೆ ಯೋಜನೆ

ಸಂ.ಕ. ಸಮಾಚಾರ, ಕನಕಪುರ

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ದಿನಗೂಲಿ ಮಾಡುವ ಕಾರ್ಮಿಕರ ಮಕ್ಕಳ ಪೋಷಣೆಗಾಗಿ ಸರ್ಕಾರ ಕೂಸಿನ ಮನೆ ಎಂಬ ಶಿಶುಪಾಲನಾ ಕೇಂದ್ರ ತೆರೆಯುವ ನೂತನ ಯೋಜನೆಯನ್ನು ಜಾರಿಗೆ ತಂದಿದೆ ಎಂದು ಟಿ.ಬೇಕುಪ್ಪೆ ಗ್ರಾ.ಪಂ. ಅಧ್ಯಕ್ಷೆ ವಿಜಯಲಕ್ಷ್ಮಿ ಪ್ರಕಾಶ್ ಹೇಳಿದರು.

ಶುಕ್ರವಾರ ತಾಲೂಕಿನ ಟಿ.ಬೇಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೇರಿನದೊಡ್ಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಕೂಸಿನ ಮನೆ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ಗ್ರಾಮಾಂತರ ಭಾಗದಲ್ಲಿ ಮಹಿಳಾ ಕೂಲಿ ಕಾರ್ಮಿಕರಿಗೆ ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಕಷ್ಟವಾಗುತ್ತದೆ. ಮಕ್ಕಳ ಪಾಲನೆಗೆ ಸಾಕಷ್ಟು ಸಮಯ ನೀಡಲು ಸಾಧ್ಯವಾಗದ ಕಾರಣ ದಿನಗೂಲಿ ತಾಯಂದಿರ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಂಡು ಸರ್ಕಾರ ಇಂತಹ ನೂತನ ಯೋಜನೆಯನ್ನು ಜಾರಿ ಮಾಡಿದೆ. ಈ ಕೂಸಿನ ಮನೆ ಶಿಶುಪಾಲನಾ ಕೇಂದ್ರದಲ್ಲಿ ತಮ್ಮ ಮಕ್ಕಳು ಸುರಕ್ಷಿತವಾಗಿ ನೋಡಿಕೊಳ್ಳಲಾಗುವುದು. ಅದಕ್ಕಾಗಿಯೇ ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನೂ ಸಹ ನೀಡಲಾಗಿದೆ. ತಮ್ಮ ಪುಟ್ಟ ಮಕ್ಕಳನ್ನು ಕೂಸಿನ ಮನೆಗೆ ಬಿಟ್ಟು ನಿರ್ಭಯವಾಗಿ ತಮ್ಮ ಕೆಲಸಗಳಲ್ಲಿ ತೊಡಗಿಸಿಕೊಂಡು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವಂತೆ ತಿಳಿಸಿದರು.

ತಾಲೂಕು ಪಂಚಾಯತಿ ಸಹಾಯಕ ನಿರ್ದೇಶಕ ಮೋಹನ್ ಬಾಬು ಮಾತನಾಡಿ ಗ್ರಾಮೀಣ ಭಾಗದ ಮಹಿಳೆಯ ಆರ್ಥಿಕ ಸ್ವಾವಲಂಬನೆಯ ನಿಟ್ಟಿನಲ್ಲಿ ಕೂಸಿನ ಮನೆ ಯೋಜನೆಯನ್ನು ನಿಮ್ಮ ನಿರವಿಗೆ ನೀಡಿದೆ. ಕೂಸಿನ ಮನೆಗಳಲ್ಲಿ 6 ತಿಂಗಳಿಂದ 3 ವರ್ಷದವರೆಗಿನ ಮಕ್ಕಳನ್ನು ನೋಡಿಕೊಳ್ಳಲಾಗುವುದು. ಆಟದ ಸಾಮಗ್ರಿ ಮತ್ತು ಪೌಷ್ಟಿಕಾಂಶಯುಕ್ತ ಆಹಾರವನ್ನು ನೀಡಿ ಪೋಷಿಸಲಾಗುವುದು ಎಂದರು.

ಗ್ರಾಮ ಪಂಚಾಯಿತಿ ಸದಸ್ಯೆ ಅರ್ಪಿತ ಶಿವಕುಮಾರ್, ಪಿಡಿಒ ಶ್ರೀನಿವಾಸ್, ಕಾರ್ಯದರ್ಶಿ ಮಹೇಶ್ವರ. ತರಬೇತುದಾರರಾದ ಸರಸ್ವತಿ, ಜಯಲಕ್ಷ್ಮಮ್ಮ, ಸಿಬ್ಬಂಧಿಗಳಾದ ರಾಜಶೇಖರ್, ಪ್ರಸನ್ನ ಕುಮಾರ್ ಹಲವರು ಉಪಸ್ಥಿತರಿದ್ದರು.

ಸಂಚಾರ ನಿಯಮ ಪಾಲಿಸಿ

ಬೊಮ್ಮನಹಳ್ಳಿ: ಪ್ರತಿಯೊಬ್ಬ ನಾಗರಿಕರು ಸಂಚಾರಿ ನಿಯಮಗಳನ್ನು ಪಾಲಿಸಬೇಕು ಎಂದು ಸಿಂಡ್ಲರ್ ಇಂಡಿಯಾ ಕಂಪನಿಯ ಸೇಫ್ಟೀ ಮ್ಯಾನೇಜರ್ ತಿಲಕ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಬೆಂ.ದ ವಲಯ-3ರ ಬೆರಟೇನ ಅಗ್ರಹಾರದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಿಂಡ್ಲರ್ ಇಂಡಿಯಾ ಮತ್ತು ನಮ್ಮ ಮೆಟ್ರೋ ಸಂಸ್ಥೆ ವತಿಯಿಂದ ಆಯೋಜಿಸಿದ್ದ “ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮ”ದಲ್ಲಿ ಭಾಗವಹಿಸಿ ಮಾತನಾಡಿದರು.

Public Notice for Loss of Share Certificate(s)
UNITED SPIRITS LIMITED

Notice is hereby given that the following Share Certificate of United Spirit Limited have been reported as lost/misplaced and have applied to the Company for the Issue of Duplicate Share Certificate

Sl No 1. ; Folio No : MS120972; Name of the Shareholder :**GOPAL SINGH CHOHAN** ; Certificate No **550942;** Distinctive nos **: 51195532-51195631;** No. of Shares 100.

Any person who have any claim in respect of the said share certificate should lodge such claims with the Share Department of the Company at its Regd Office at UB Tower Level 6 #24, Vittal Mallya Road UB City, Bengaluru, Karnataka, 560001 given within 15 days of the publication of this Notice, After which no claim will be entertained and the Company will proceed to issue the duplicate share certificates.

Sd/-
GOPAL SINGH CHOUHAN
PLACE: JAIPUR
DATE: 19.01.2024

ಅಂಬೇಡ್ಕರ್ ಸಮಿತಿ ನೇತೃತ್ವದಲ್ಲಿ ಅಂತರ್ಜಾತೀಯ ವಿವಾಹಕ್ಕೆ ನಾಂದಿ

ಸಂ.ಕ. ಸಮಾಚಾರ, ಹೊಸಕೋಟೆ

ನಗರದ ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ನವಜೋಡಿಗೆ ಅಂತರ್ಜಾತೀಯ ವಿವಾಹ ಮಾಡಿ ಜಾತಿ ನಿರ್ಮೂಲನೆಗೆ ನಾಂದಿ ಹಾಡಿದರು.

ಮಹಾನಾಯಕ ಅಂಬೇಡ್ಕರ್ ಸಮಿತಿಯ ತಾಲೂಕು ಅಧ್ಯಕ್ಷರಾದ ಬಂಡಳ್ಳಿ ಪ್ರಶಾಂತ್ ಅವರು ಈ ವೇಳೆ ಮಾತನಾಡಿ ಶಿಡ್ಲಘಟ್ಟ ತಾಲೂಕಿನ ಚೀಮಂಗಲ ಗ್ರಾಮದ ಸೌಮ್ಯ ಹಾಗೂ ಶಿಡ್ಲಘಟ್ಟದ ಅರುಣ್ ಎಂಬುವವರು ಕಳೆದ ಎರಡು ವರ್ಷಗಳಿಂದ ಪರಸ್ಪರ ಪ್ರೀತಿಸುತಿದ್ದು, ಒಂದೇ ಖಾಸಗಿ ಕಂಪನಿಯಲ್ಲಿ ಉದ್ಯೋಗ ಮಾಡುತ್ತಿದ್ದರು. ಇಬ್ಬರಿಗೂ ಕೂಡ ಬದುಕಿನ ಅರಿವಿದ್ದು, ಮದುವೆಗೆ ಅವರ ಮನೆಯವರು ಜಾತಿ ನೆಪವೊಡ್ಡಿ ಅಡ್ಡಿಪಡಿಸುತಿದ್ದ ಕಾರಣ ನಮ್ಮ ಬಳಿ ಬಂದು ಮದುವೆ ಮಾಡಿಸುವಂತೆ ಮನವಿ ಮಾಡಿದ ಬೆನ್ನಲ್ಲೇ ಬಸವಣ್ಣನವರ ಜಾತಿ ನಿರ್ಮೂಲನೆಯ ತತ್ತ್ವದಡಿಯಲ್ಲಿ ರಾಷ್ಟಕವಿ ಕುವೆಂಪು ಅವರ ಮಂತ್ರ ಮಾಂಗಲ್ಯದ ತತ್ತ್ವದಂತೆ ಅಂಬೇಡ್ಕರ್ ಅವರ ಪ್ರತಿಮೆ ಮುಂಭಾಗದಲ್ಲಿ ಸರಳ ವಿವಾಹ ನೆರವೇರಿಸಿ ಶುಭಕೋರಲಾಗಿದೆ ಎಂದರು.

ಮಹಾನಾಯಕ ಅಂಬೇಡ್ಕರ್ ಸಮಿತಿಯ ತಾಲೂಕು ಗೌರವಾಧ್ಯಕ್ಷರಾದ ಕೆಂಲರಾಜು, ಯುವ ಘಟಕದ ಅಧ್ಯಕ್ಷರಾದ ರವಿಶಂಕರ್, ರಕ್ಷಣಾ ವೇದಿಕೆ ಭಾರತಿಗೌಡ ಯುವ ಮುಖಂಡರಾದ ಯಶವಂತ್ ಸೂರಿ ಹಾಗೂ ಇನ್ನಿತರರು ಇದ್ದರು.

ನಗರದ ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ಮಹಾನಾಯಕ ಅಂಬೇಡ್ಕರ್ ಸಮಿತಿಯ ಪಧಾದಿಕಾರಿಗಳು ಮಂತ್ರ ಮಾಂಗಲ್ಯ ನೆರವೇರಿಸಿದರು.

ಮಹಾಯೋಗಿ ವೇಮನ ಜಯಂತಿ | ತೆಲುಗು ಸಾಹಿತ್ಯದ ಅಗ್ರಗಣ್ಯರು

ಆಧ್ಯಾತ್ಮಿಕ ಚಿಂತಕರು ವೇಮನರು

ಸಂ.ಕ. ಸಮಾಚಾರ, ರಾಮನಗರ

ಶ್ರೀ ಮಹಾಯೋಗಿ ವೇಮನರು ವೈರಾಗಿಯಾಗಿ ತಮ್ಮ ಕವಿತೆಗಳನ್ನು ತಾಳೆಗರಿಗಳಲ್ಲಿ ರಚಿಸುತ್ತಿದ್ದರು. ಅವರು ತೆಲುಗಿನ ಶ್ರೇಷ್ಠ ಕವಿಯಾಗಿದ್ದು, ಅವರ ಕವನಗಳಲ್ಲಿ ಸಮಾಜದಲ್ಲಿ ಸಮಾನತೆಯನ್ನು ಮೂಡಿಸಬೇಕು ಎಂದು ವೇಮನ ಸಮುದಾಯದ ಮುಖಂಡ ಗೋವಿಂದರಾಜು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏರ್ಪಡಿಸಲಾಗಿದ್ದ ಶ್ರೀ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವೇಮನರು ದೇಶಕಂಡ ಸರಳ, ಸಂತ ಕವಿ ಚೈತನ್ಯ ಇವರು ರಾಜಮನೆತನದಲ್ಲಿ ಜನಿಸಿದರೂ ಎಲ್ಲವನ್ನು ತ್ಯಜಿಸಿ ತ್ರಿಲೋಕ ಸಂಚಾರಿಯಾಗಿ ಲೋಕಜ್ಞಾನಿಯಾದರು. ವೇಮನರು ತೆಲುಗು ಸಾಹಿತ್ಯದ ಅಗ್ರಗಣ್ಯರು, ಆಧ್ಯಾತ್ಮಿಕ ಚಿಂತಕರು ವೇಮನರು ಮೊದಲಿಗೆ ದುಶ್ಚಟಗಳ ದಾಸರಾಗಿದ್ದರು. ಅವರ ಅತ್ತಿಗೆ ಹೇಮರೆಡ್ಡಿ ಮಲ್ಲಮ್ಮ ವೇಮನರ ತಪ್ಪುಗಳನ್ನು ತಿದ್ದಿ ಅವರನ್ನು ಮಹಾನ್ ವ್ಯಕ್ತಿಯಾಗಿ ರೂಪಿಸಿದರು. ಅವರು ಬರೆದಂತಹ ಅನೇಕ ಕವಿತೆಗಳನ್ನು ಕೈವಾರದ ತಾತಯ್ಯ ಅವರು ಬೆಳಕಿಗೆ ತಂದರು ಎಂದು ವಿವರಿಸಿದರು. ಜಿಲ್ಲಾಧಿಕಾರಿ ಡಾ.ಅವಿನಾಶ್ ಮೆನನ್ ರಾಜೇಂದ್ರನ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಶ್ರೀ ಮಹಾಯೋಗಿ ವೇಮನ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಮೇಶ್ ಬಾಬು, ಸಮುದಾಯದ ಮುಖಂಡರುಗಳಾದ ಚಂದ್ರಶೇಖರ್‌ರೆಡ್ಡಿ, ದರ್ಶನ್‌ರೆಡ್ಡಿ, ಮನ್‌ಶಾನ್‌ರೆಡ್ಡಿ, ಸುರೇಂದ್ರರೆಡ್ಡಿ, ಸಂದೀಪ್‌ರೆಡ್ಡಿ, ಸರ್ವೇಶ್‌ರೆಡ್ಡಿ, ವನಮಾಲ ರೆಡ್ಡಿ, ನಿರ್ಮಲ ರೆಡ್ಡಿ, ಶಾರದಾರೆಡ್ಡಿ ಹಾಗೂ ಇತರರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಮನಗರದಲ್ಲಿ ನಡೆದ ಶ್ರೀ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಅವಿನಾಶ್ ಮೆನನ್ ರಾಜೇಂದ್ರನ್ ಉದ್ಘಾಟಿಸಿದರು.

> **ವೇಮನರು ದೇಶಕಂಡ ಸರಳ, ಸಂತ, ಕವಿ ಚೈತನ್ಯರು**

ಮಾರಾಕಾಸ್ತ್ರದಿಂದ ಹಲ್ಲೆ

ಕನಕಪುರ: ಆಸ್ತಿ ವಿಚಾರದ ಹಿನ್ನೆಲೆಯಲ್ಲಿ ಮಹಿಳೆಯೊಬ್ಬರನ್ನು ಜಮೀನು ವಿಚಾರಕ್ಕೆ ದಾಯಾದಿ ಸಹೋದರ ಮಾರಾಕಾಸ್ತ್ರದಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿರುವ ಘಟನೆ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಭದ್ರೇಗೌಡನದೊಡ್ಡಿ ಗ್ರಾಮದಲ್ಲಿ ಜರುಗಿದೆ. ಕೊಟ್ಟಗಾಳು ಪಂಚಾಯತಿ ಭದ್ರೇಗೌಡನದೊಡ್ಡಿ ಗ್ರಾಮದ ಹೊಂಬಾಳೇಗೌಡರ ಪತ್ನಿ ಜಯಮ್ಮ (50) ಕೊಲೆಯಾದ ದುರ್ದೈವಿಯಾಗಿದ್ದಾರೆ. ಅದೇ ಗ್ರಾಮದ ರಾಮೇಗೌಡರ ಮಗ ಸ್ವಾಮಿ ಕೊಲೆ ಮಾಡಿರುವ ಆರೋಪಿಯಾಗಿದ್ದಾನೆ. ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸ್ವಾಮಿ ಶುಕ್ರವಾರ ಮಧ್ಯಾಹ್ನ ವೇಳೆ ಜಯಮ್ಮರ ಮನೆಯ ಸಮೀಪದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಜಯಮ್ಮ ಎಂಬುವವರೊಂದಿಗೆ ಆಸ್ತಿಯ ವಿಚಾರವಾಗಿ ಜಗಳ ತೆಗೆದು ಮಾತಿಗೆ ಮಾತು ಬೆಳೆಸಿ ಕೋಪದಿಂದ ಮಚ್ಚು ಮತ್ತು ಸಚನಿಕೆಯಿಂದ ಕೊಚ್ಚಿ ಕೊಲೆ ಮಾಡಿ ಸ್ಥಳದಿಂದ ಪರಾರಿಯಾಗಿದ್ದಾನೆ. ವಿಷಯ ತಿಳಿದ ಕನಕಪುರ ಗ್ರಾಮಾಂತರ ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಎಲ್. ಕೃಷ್ಣ, ಸಬ್‌ಇನ್ಸ್‌ಪೆಕ್ಟರ್ ಮನೋಹರ್ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಶವವನ್ನು ದಯಾನಂದ ಸಾಗರ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಕಳುಹಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ವಿವರಗಳಿಗೆ ಸಂಪರ್ಕಿಸಿ : ಚಿಕ್ಕ ಜಾಹಿರಾತು
9740809407, 9902008429 & 9620746423
E-mail : skadvtblr@gmail.com

ಬಹಿರಂಗ ಹರಾಜು

ಮೆ॥ ಅಂಬಿಕಾ ಪಾನ್‌ಬ್ರೋಕರ್ಸ್, # 94, 3ನೇ ಮೇನ್ ರೋಡ್, ಜನತಾನಗರ, ಟಿ.ಕೆ. ಲೇಔಟ್, ಮೈಸೂರು. ಇವರಲ್ಲಿ 10-11-2020 ರಿಂದ 22-08-2022 ರವರೆಗೆ ಗಿರವಿ ಇಟ್ಟು ಬಿಡಿಸಿಕೊಳ್ಳದ ಪದಾರ್ಥಗಳನ್ನು ದಿನಾಂಕ 18-01-2024 ರಂದು ಬೆಳಿಗ್ಗೆ 11.00 ಗಂಟೆಗೆ (ಕಾರಣಾಂತರಗಳಿಂದ ಹರಾಜು ದಿನಾಂಕವನ್ನು 20-01-2024 ರಂದು ಮಧ್ಯಾಹ್ನ 2.00 ಗಂಟೆಗೆ ಮುಂದೂಡಲಾಗಿದೆ) ಈ ಮೇಲ್ಕಂಡ ವಿಳಾಸದಲ್ಲಿ ನರೇಶ್ ಕುಮಾರ್, ಗೌ. ಅಪ್ರೂವ್ಡ್ ಆಕ್ಷನೀಯರ್, ಕೆ-50, ಬನುಮಯ್ಯ ಚೌಕ, ಮೈಸೂರು-24. ಇವರು ಹರಾಜು ಮಾಡುವರು.

ಬಹಿರಂಗ ಹರಾಜು

ಮೆ॥ ಸಂತೋಷ್ ಪಾನ್ ಬ್ರೋಕರ್ಸ್, # 96, ಎ.ಜಿ. ಬ್ಲಾಕ್, 7ನೇ ಕ್ರಾಸ್, ಎನ್.ಆರ್. ಮೊಹಲ್ಲ, ಮೈಸೂರು. ಇವರಲ್ಲಿ 09-01-2021 ರಿಂದ 25-12-2021 ರವರೆಗೆ ಗಿರವಿ ಇಟ್ಟು ಬಿಡಿಸಿಕೊಳ್ಳದ ಪದಾರ್ಥಗಳನ್ನು ದಿನಾಂಕ 22-01-2024 ರಂದು ಬೆಳಿಗ್ಗೆ 11.00 ಗಂಟೆಗೆ ಈ ಮೇಲ್ಕಂಡ ವಿಳಾಸದಲ್ಲಿ ನರೇಶ್ ಕುಮಾರ್, ಗೌ. ಅಪ್ರೂವ್ಡ್ ಆಕ್ಷನೀಯರ್, ಕೆ-50, ಬನುಮಯ್ಯ ಚೌಕ, ಮೈಸೂರು-24. ಇವರು ಹರಾಜು ಮಾಡುವರು.

ಬಹಿರಂಗ ಹರಾಜು

ಮೆ॥ ಗೌರಿ ಪಾನ್‌ಬ್ರೋಕರ್ಸ್, ನಂ. 30, ಬಜಾರ್ ಸ್ಟ್ರೀಟ್, ನೀಲಸಂದ್ರ, ಬೆಂಗಳೂರು - 560047. ಗಿರವಿ ಅಂಗಡಿಯಲ್ಲಿ ದಿನಾಂಕ : 25-10-2021 ರಿಂದ 27-12-2022 ರ ಅವಧಿಯಲ್ಲಿ ಗಿರವಿ ಇಟ್ಟು ವಾಯಿದೆ ಮೀರಿದ್ದರೂ ಸಹ ಬಿಡಿಸದೆ ಇರುವ ವಸ್ತುಗಳನ್ನು (ಸೂಚನೆ : ಕರ್ನಾಟಕ ಋಣ ಪರಿಹಾರ ಕಾಯ್ದೆಯಡಿಯಲ್ಲಿ ಬರುವ ವಸ್ತುಗಳನ್ನು ಹೊರತು ಪಡಿಸಿ) ಕೆ.ಪಿ.ಬಿ. ಆಕ್ಟ್ 20(1)ನೇ ಪ್ರಕಾರ ಬಹಿರಂಗ ಹರಾಜು ಮೂಲಕ ದಿನಾಂಕ : 25-01-2024 ರಂದು ಬೆಳಿಗ್ಗೆ 10.00 ಗಂಟೆಗೆ ಮೇಲ್ಕಂಡ ಗಿರವಿದಾರರ ವಿಳಾಸದಲ್ಲಿ ಶ್ರೀ ಬಿ. ಅಶೋಕ್ ಕುಮಾರ್ (ಸರ್ಕಾರಿ ಮಾನ್ಯತೆ ಪಡೆದ ಹರಾಜುದಾರರು) ನಂ. 43, ಸ್ಪಿಂಗ್ಸ್ ರೋಡ್, ಬೆಂಗಳೂರು-560001. ಇವರು ಹರಾಜು ಮಾಡುವರು. ಹೆಚ್ಚಿನ ವಿವರಗಳಿಗಾಗಿ ಗಿರವಿದಾರರನ್ನು ಸಂಪರ್ಕಿಸಿ. (ಹರಾಜಿನಲ್ಲಿ ಭಾಗವಹಿಸುವವರು ದಯಮಾಡಿ ಸಾಮಾಜಿಕ ಅಂತರ ಮತ್ತು ಮಾಸ್ಕ್ ಧರಿಸಬೇಕಾಗಿ ವಿನಂತಿ).

CHANGE OF NAME

I, **Richa Arun Saraf** D/o Arun Saraf born on 13 June 1988 R/o #34/58 Rams Villa Apt, Flat 2B, 2nd floor, 10B Cross, Behind Oxford School, JP Nagar 1st Phase, Bangalore 560078, have changed my name from **RICHA ARUN SARAF** to **RICHA SARAF BANSAL,** henceforth I shall be known and called as **RICHA SARAF BANSAL** only for all purposes, vide affidavit dated 18.01.2024, sworn before Advocate and Notary **H.S. DHARMA PRASAD,** at Bangalore.

ಆಸ್ತಿ ಮಾರಾಟಕ್ಕಾಗಿ ಆನ್‌ಲೈನ್ ಇ-ಹರಾಜು
kotak Kotak Mahindra Bank
ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್
ನೋಂದಾಯಿತ ಕಚೇರಿ : 27 ಬಿಕೆಸಿ, ಸಿ 27 ಜಿ-ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಪೂರ್ವ ಮುಂಬೈ, ಮಹಾರಾಷ್ಟ್ರ, ಪಿನ್ ಕೋಡ್ - 400 051.
ಶಾಖೆ ಕಚೇರಿ : ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್, 185, 2ನೇ ಮಹಡಿ, ಮೌಂಟ್ ರಸ್ತೆ, ಅಣ್ಣಾ ಸಲೈ, ಚೆನ್ನೈ - 600 006
(ಲ್ಯಾಂಡ್ ಮಾರ್ಕ್: ಸಿಟ್ರಾನ್ ಕಾರ್ ಶೋ ರೂಂ ಮತ್ತು ಥೌಸಂಡ್ ಲೈಟ್ಸ್ ಮೆಟ್ರೋ ಸ್ಟೇಷನ್ ಪಕ್ಕ)

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯಿದೆ ಜಾರಿ, 2002ರ ಅಡಿಯಲ್ಲಿ ನಿಯಮ 8 (5) ಮತ್ತು ನಿಯಮ 8(6)ರ ಅಧಿ ನಿಯಮದ ನಿಬಂಧನೆಗಳನ್ನು ಓದಿಕೊಂಡಂತೆ ಭದ್ರತಾ ಬಡ್ಡಿ (ಜಾರಿ) ನಿಯಮ, 2002ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಈ ಮೂಲಕ ಸಾರ್ವಜನಿಕರು ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಜಾಮೀನುದಾರರಿಗೆ ಸೂಚಿಸುವುದು ಏನೆಂದರೆ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು, ಭದ್ರತಾ ಸಾಲಗಾರನಿಗೆ ಅಡಮಾನ/ಒತ್ತೆ ಇಡಲಾಗಿದ್ದು, ಅದನ್ನು **ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ (ಈ ನಂತರ "ಪಿಎನ್‌ಬಿಎಚ್‌ಎಫ್‌ಎಲ್" ಎಂದಾಗಿದೆ) ಅಧಿಕೃತ ಅಧಿಕಾರಿಯು** ಸ್ವಾಧೀನ ಪಡೆಸಿಕೊಂಡಿದ್ದು, ಸಾಲದ ಒಪ್ಪಂದದ ನಿಯೋಜನೆ ಅನುಸಾರ **ಕೋಟಕ್ ಮಹೀಂದ್ರ ಬ್ಯಾಂಕ್ ಪರವಾಗಿ "ಪಿಎನ್‌ಬಿಎಚ್‌ಎಫ್‌ಎಲ್"ಗೆ, ಬಾಕಿ ಉಳಿದಿರುವ ಮೊತ್ತ ರೂ.** 23,47,718/-(ರೂಪಾಯಿ ಇಪ್ಪತ್ಮೂರು ಲಕ್ಷ ನಾಲ್ವತ್ತೇಳು ಸಾವಿರ ಏಳು ನೂರಾ ಹದಿನೆಂಟು ಮಾತ್ರ) ಅನ್ನು ದಿನಾಂಕ : 26-08-2017 ರಂತೆ ಮತ್ತು ದಿನಾಂಕ : 27-08-2017 ರಂತೆ ಒಪ್ಪಂದದ ಬಡ್ಡಿ, ಪಾವತಿಯಾಗುವವರೆಗೆ ವೆಚ್ಚ ಹಾಗೂ ಶುಲ್ಕದೊಂದಿಗೆ ಅನ್ವಯವಾಗುವ ಮೊತ್ತದ ವಸೂಲಿಗಾಗಿ **ಸಾಲದ ಖಾತೆ ನಂ. HOU/BAN/0416/281474ರಲ್ಲಿ ತಿಳಿಸಲಾದ ಮೊತ್ತವನ್ನು ಕೆಎಂಬಿಎಲ್‌ನ ಭದ್ರತಾ ಸಾಲಗಾರರು ಮಂಗಳಾ ಸಿ ಮತ್ತು ನಟರಾಜ ಕೆ.ಎಂ., ಅವರ ಇಲ್ಲಿ ತಿಳಿಸಲಾದ ಆಸ್ತಿಯನ್ನು "ಎಲ್ಲಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಹೇಗಿದೆಯೋ ಹಾಗೆ"** ಅದರ ಮಾರಾಟವನ್ನು ದಿನಾಂಕ : 15-02-2024 ರಂದು ಮಧ್ಯಾಹ್ನ 12.00 ರಿಂದ 01.00 ರವರೆಗೆ 5 ನಿಮಿಷಗಳ ವಿಸ್ತರಣೆಯೊಂದಿಗೆ ನಡೆಸಲಾಗುತ್ತದೆ. **ಮೀಸಲು ಬೆಲೆ ರೂ.** 20,25,000/- (ರೂಪಾಯಿ ಇಪ್ಪತ್ತು ಲಕ್ಷ ಇಪ್ಪತ್ತೈದು ಸಾವಿರ ಮಾತ್ರ). **ಮುಂಗಡ ಠೇವಣಿ ಹಣ ರೂ.** 2,02,500/- (ರೂಪಾಯಿ ಎರಡು ಲಕ್ಷ ಎರಡು ಸಾವಿರ ಐದು ನೂರು ಮಾತ್ರ) **ಕೆವೈಸಿಯೊಂದಿಗೆ ಇಎಂಡಿ ಸಲ್ಲಿಸುವ ಕೊನೆ ದಿನಾಂಕ : 14-02-2024 ರಂದು ಸಂಜೆ 6.00 ರವರೆಗೆ.**

ಆಸ್ತಿ ವಿವರಣೆ : ಸ್ವತ್ತಿನ ಎಲ್ಲ ಭಾಗ-ವಿಭಾಗ ಸೇರಿ ಪಾಲಿಕೆ ನಂ. 31, ಪಿಐಡಿ ನಂ. 21-53-31, ಅಳತೆ ಪೂರ್ವ-ಪಶ್ಚಿಮ: 25 ಅಡಿ, ಉತ್ತರ-ದಕ್ಷಿಣ: 20 ಅಡಿ, ಒಟ್ಟು ಅಳತೆ 500 ಚದರ ಅಡಿ, ಅಗ್ರಹಾರ ದಾಸರಹಳ್ಳಿ, 9ಎ ಕ್ರಾಸ್ ರಸ್ತೆ, ವಾರ್ಡ್ ನಂ. 21, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು. ಚಕ್ಕುಬಂಧಿ :- ಪೂರ್ವ: ನರಸಿಂಹಯ್ಯ ಅವರ ಆಸ್ತಿ, ಪಶ್ಚಿಮ: ಗ್ರಾಮಠಾಣಾ ಖಾಲಿ ಜಮೀನು, ಉತ್ತರ: ಶ್ರೀಮತಿ ಕಾಂಚನ ಅವರ ಆಸ್ತಿ, ದಕ್ಷಿಣ: ರಸ್ತೆ.

ಈ ಮೂಲಕ ಸಾಲಗಾರರಿಗೆ ತಿಳಿಸುವುದೇನೆಂದರೆ ಸರ್ಫೈಸಿ ಕಾಯಿದೆಯ ಸೆಕ್ಷನ್ 13 ರ ಉಪವಿಭಾಗ 8ರ ನಿಬಂಧನೆಯಲ್ಲಿ ಭದ್ರತಾ ಆಸ್ತಿಯನ್ನು ಪಡೆದುಕೊಳ್ಳಬಹುದು. ಯಾವುದೇ ಕಾರಣಕ್ಕೂ ಇಲ್ಲಿ ನಿಗದಿತ ಹರಾಜು ವಿಫಲವಾದಲ್ಲಿ ಯಾವುದಾದರೂ ಕಾರಣದಿಂದ ಭದ್ರತಾ ಸಾಲದಾತರು ಖಾಸಗಿ ಒಪ್ಪಂದದ ಮೂಲಕ ಮಾರಾಟದ ಭದ್ರತಾ ಬಡ್ಡಿಯನ್ನು ಜಾರಿಗೊಳಿಸಬಹುದು ಎಂಬುದನ್ನು ನಿರ್ದಿಷ್ಟವಾಗಿ ಸಾಲಗಾರರಿಗೆ ತಿಳಿಸಲಾಗಿದೆ.

ಮಾರಾಟದಲ್ಲಿರುವ ಸ್ವತ್ತುಗಳ ಬಗ್ಗೆ ಯಾವುದೇ ಸ್ಪಷ್ಟೀಕರಣ / ಅಗತ್ಯವಿದ್ದಲ್ಲಿ, ಬಿಡ್ಡರ್‌ಗಳು **ಶ್ರೀಚರಣ್** (+919738931789), (+91-9152219751) **ಮತ್ತು ರಾಜೇಂದ್ರ ದಾಹಿಯಾ** (+91 8448264515) ಅವರನ್ನು ಸಂಪರ್ಕಿಸಬಹುದು.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಲಿಂಕ್ (http://www.kotak.com/en/bank-auctions.html ಹಾಗೂ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ವೆಬ್‌ಸೈಟ್ : www.kotak.com or https://bankauctions.in ಅನ್ನು ನೋಡಿ.

ಸ್ಥಳ: ಬೆಂಗಳೂರು
ದಿನಾಂಕ : 20.01.2024
ಅಧಿಕೃತ ಅಧಿಕಾರಿ
ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್.

ಘನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ
ತಿ.ನರಸೀಪುರ
ಅಸಲು ದಾವಾ ಸಂಖ್ಯೆ 156/2021

ವಾದಿ: ಶೇಖರ್ ಕೆ ವಿರುದ್ಧ
ಪ್ರತಿವಾದಿಗಳು: ಮಲ್ಲಮ್ಮ ಮತ್ತು ಇತರರು
2ನೇ ಪ್ರತಿವಾದಿ: ಮಹದೇವಸ್ವಾಮಿ ಬಿನ್ ಬಸವಯ್ಯ ವಯಸ್ಸು 52 ವರ್ಷ ನಂ. 162, 1ನೇ ಮುಖ್ಯರಸ್ತೆ, ಬಾಬಾಸಾಗರಪಾಳ್ಯ ಕೆಂಗೇರಿ, ಬೆಂಗಳೂರು ದಕ್ಷಿಣ ಬೆಂಗಳೂರು- 560060
11ನೇ ಪ್ರತಿವಾದಿ: ಮರಿಯಮ್ಮ ಕೋಂ ಲೇಟ್ ಸಿದ್ದಯ್ಯ ವಯಸ್ಸು 62 ವರ್ಷ ನಂ.590, ಲಗ್ಗೆರೆ ಕ್ವಾಟ್ರಸ್, 'ಡಿ' ಬ್ಲಾಕ್ ಬೆಂಗಳೂರು

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಪ್ರಕರಣದ ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಈ ಮೇಲಿನ ಘನ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು ಸದರಿ ದಾವೆಯಲ್ಲಿ 2 ಮತ್ತು 11ನೇ ಪ್ರತಿವಾದಿಗಳು ನ್ಯಾಯಾಲಯದ ಸಮನ್ಸ್ ಮತ್ತು ನ್ಯಾಯಾಲಯದಿಂದ ಹೊರಡಿಸಿದ ರಿಜಿಸ್ಟರ್ ಪೋಸ್ಟ್ 2 ಮತ್ತು 11ನೇ ಪ್ರತಿವಾದಿಗಳಿಗೆ ತಲುಪದೇ ಸದರಿ ಮೇಲ್ಕಂಡ ವಿಳಾಸದಲ್ಲಿ 2 ಮತ್ತು 11ನೇ ಪ್ರತಿವಾದಿಗಳು ಇಲ್ಲವೆಂಬ ಷರಾದೊಂದಿಗೆ ನೋಂದಾಯಿತ ಅಂಚೆಯ ಮೂಲಕ ಹಿಂದಕ್ಕೆ ಬಂದಿರುತ್ತದೆ ಆದ್ದರಿಂದ ಸದರಿ ಅರ್ಜಿಯು ಮೇಲ್ಕಂಡ 2 ಮತ್ತು 11ನೇ ಪ್ರತಿವಾದಿಗಳ ಹಾಜರಿಗಾಗಿ **ದಿನಾಂಕ: 14/02/24 ದಿನದಂದು ಬೆಳಿಗ್ಗೆ 11 ಗಂಟೆಗೆ** ಘನ ನ್ಯಾಯಾಲಯವು ನಿಗದಿಪಡಿಸಿದ್ದು ಸದರಿ ಮೇಲ್ಕಂಡ ದಿನದಂದು ಮೇಲ್ಕಂಡ 2 ಮತ್ತು 11ನೇ ಪ್ರತಿವಾದಿಗಳಾಗಲಿ ಅಥವಾ ಅದರ ಪರ ವಕೀಲರ ಮೂಲಕವಾಗಲೀ ಮೇಲ್ಕಂಡ ದಿನದಂದು ಹಾಜರಾಗಬೇಕೆಂದು ಈ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ ತಪ್ಪಿದ್ದಲ್ಲಿ ಪ್ರಕರಣವನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ ತಿ. ನರಸೀಪುರ ತಾಲ್ಲೂಕು ಕಸಬಾ ಹೋಬಳಿ ಕೊಡ್ಲೂರು ಗ್ರಾಮದ ಸರ್ವೆ ನಂ. 126/2 ರ ವಿಸ್ತೀರ್ಣ 0.34 ಗುಂಟೆ ಜಮೀನಿಗೆ ಚಕ್ಕುಬಂದಿ **ಪೂರ್ವಕ್ಕೆ:** ಓಣಿ ಮತ್ತು ಲಾ. ಸ ನಂ.131 ಮತ್ತು 125 ರ ಜಮೀನು **ಪಶ್ಚಿಮಕ್ಕೆ:** ಈಶ್ವರಗೌಡನಹಳ್ಳಿ ಗಡಿ **ಉತ್ತರಕ್ಕೆ:** ರಸ್ತೆ ಮತ್ತು ಮಾದೇಗೌಡ ಬಿನ್ ಮಾದೇಗೌಡ ರವರ ಜಮೀನು **ದಕ್ಷಿಣಕ್ಕೆ:** ರಸ್ತೆ

ನ್ಯಾಯಾಲಯದ ಮೊಹರಿನೊಡನೆ ದಿನಾಂಕ:02/01/24 ರಂದು ನೀಡಿದೆ

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು
ಘನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಾಲಯ
ತಿ.ನರಸೀಪುರ

ವಿ. ಎಂ. ಕಿರಣ್‌ಕುಮಾರ್ ಬಿಕಾಂ. ಎಲ್‌ಎಲ್.ಬಿ ವಕೀಲರು
ತಿ.ನರಸೀಪುರ

ಭಾರತೀಯ ಸ್ಟೇಟ್ ಬ್ಯಾಂಕ್
ಚಿಲ್ಲರೆ ಆಸ್ತಿಗಳ ಕೇಂದ್ರ ಸಂಸ್ಕರಣಾ ಕೇಂದ್ರ-ಶಂಕರಪುರಂ, ರಾಮಕೃಷ್ಣ ಆಶ್ರಮದ ಎದುರು, ಬಸವನಗುಡಿ, ಬೆಂಗಳೂರು-560004,
ಫೋನ್: 080-259433007, ಇ-ಮೇಲ್: support.shankarpuram@sbi.co.in

ದಿನಾಂಕ 29.01.2024ರಂದು ಇ-ಹರಾಜು ಮಾರಾಟದ ಮೂಲಕ ವಾಹನಗಳ ಮಾರಾಟಕ್ಕಾಗಿ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಗೆ ವಿವರಿಸಿರುವ ವಾಹನಗಳನ್ನು **ಭಾರತೀಯ ಸ್ಟೇಟ್ ಬ್ಯಾಂಕ್, ಆರ್‌ಎಸಿಪಿಸಿ, ಶಂಕರಪುರಂ,** ಇವರಿಂದ ಈ ನೋಟೀಸಿನಲ್ಲಿ ಸೂಚಿಸಿರುವ ದಿನಾಂಕ ಮತ್ತು ಸಮಯದಂದು **"ಎಲ್ಲಿ ಹೇಗಿದೆಯೋ ಹಾಗೆ"** ಆಧಾರದ ಮೇಲೆ ಇ-ಹರಾಜು ಮಾರಾಟದ ಮೂಲಕ ಮಾಡಲಾಗುವುದು.

ಕ್ರ. ಸಂ.	ಸಾಲಗಾರರ ಹೆಸರು	ಲೋನ್ ಅಕೌಂಟ್ ನಂ.	ವಾಹನದ ಮಾಡೆಲ್	ನೋಂದಣಿ ಸಂಖ್ಯೆ	ಇಂಧನ	ಮೀಸಲು ಬೆಲೆ ಜಿಎಸ್‌ಟಿ ಸೇರಿದ (ಬೆಲೆ ರೂ.ಗಳಲ್ಲಿ)
1	ಸುನೀಲ್ ಕುಮಾರ್ .ಎನ್	41231047156	HYUNDAI GRAND i10 NIOS 1.2 MT KAPPA SPORTZ BSS VI	KA-02-MS-9745	PETROL	ರೂ. 5,70,000
2	ಅಶೋಕ್ ಜೈನ್	40242244159	MARUTI SWIFT VXI BS VI	KA-02-MR-4091	PETROL	ರೂ. 5,51,000

ಇ-ಹರಾಜು ಮಾರಾಟದ ದಿನಾಂಕ ಮತ್ತು ಸಮಯ : 29.01.2024, ಮಧ್ಯಾಹ್ನ 3.00 ರಿಂದ ಸಂಜೆ 4.00 ಗಂಟೆಯವರೆಗೆ (ಪ್ರತಿ ಬಿಡ್‌ಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆ). ಇಎಂಡಿ ಮೇಲೆ ಸೂಚಿಸಿರುವಂತೆ ಪ್ರತಿ ವಾಹನದ ಮೀಸಲು ಬೆಲೆಯ 10% (ಯಶಸ್ವಿಯಾಗದ ಬಿಡ್ಡರ್‌ಗಳಿಗೆ ಇಎಂಡಿ ಹಣವನ್ನು ಹಿಂದಿರುಗಿಸಲಾಗುವುದು).

ಸಂಪರ್ಕಿಸುವ ಏಜೆನ್ಸಿ : ಕ್ರ.ಸಂ. 1) ಮೆ. ಈಗಲ್ ಅಸೋಸಿಯೇಟ್ಸ್, ರಘು, ಮೊಬೈಲ್ : 8904146917, ಕ್ರ.ಸಂ. 2) ಲಕ್ಷ್ಮೀ ರಿಕವರಿ ಏಜೆನ್ಸಿ, ಪರಮೇಶ್‌ರೆಡ್ಡಿ, ಮೊಬೈಲ್ : 9618048183, ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : 25.01.2024

ನಿಯಮಗಳು ಮತ್ತು ನಿಬಂಧನೆಗಳು : 1) ಇ-ಹರಾಜು ಮಾರಾಟವನ್ನು ಎಲ್ಲಿ ಹೇಗಿದೆಯೋ ಹಾಗೆ ಆಧಾರದ ಮೇಲೆ ನಡೆಸಲಾಗುವುದು. ವಾಹನದ ಮೇಲೆ ಪರಿಣಾಮ ಬೀರುವ ಇತರ ಯಾವುದೇ ಸಂಗತಿಗಳಿಗೆ ಬ್ಯಾಂಕ್ ಜವಾಬ್ದಾರರಲ್ಲ. 2) ಇ-ಹರಾಜು ಮಾರಾಟವನ್ನು **ದಿನಾಂಕ 29.01.2024** ರಿಂದ ಪೋರ್ಟಲ್ **https://ibapi.in** ಮೂಲಕ ನಡೆಸಲಾಗುವುದು. 3) ಇ-ಹರಾಜು ಮಾರಾಟದ ಪ್ರಕ್ರಿಯೆಯ ವಿವರಗಳಿಗೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಆಸಕ್ತ ಬಿಡ್ಡರ್‌ಗಳು **https://ibapi.in** ಸಂದರ್ಶಿಸಿ **25.01.2024 ರಂದು ಸಂಜೆ 4.00 ಗಂಟೆಗೆ** ಅಥವಾ ಮೊದಲು ಇ-ಬಿಕ್ರೆನೊಂದಿಗೆ ವ್ಯಾಲೆಟ್‌ಗೆ ಮೊತ್ತವನ್ನು ಸಲ್ಲಿಸಬೇಕು. ಮತ್ತು ವ್ಯವಹಾರದ ನಿಯಮಗಳ ದಾಖಲೆಯನ್ನು ಡೌನ್‌ಲೋಡ್ ಮಾಡಬಹುದು. 4) ಇ -ಹರಾಜಿನ ವಿವರವಾದ ಕಾರ್ಯವಿಧಾನ ಮತ್ತು ನಿಯಮಗಳು ಮತ್ತು ಷರತ್ತುಗಳಿಗಾಗಿ ಆಸಕ್ತ ಬಿಡ್‌ದಾರರು **https://ibapi.in** ಅನ್ನು ಸಂದರ್ಶಿಸಬಹುದು ಮತ್ತು ಬಿಸಿನೆಸ್ ನಿಯಮದ ದಾಖಲೆಯನ್ನು ಡೌನ್‌ಲೋಡ್ ಮಾಡಬಹುದು. 5) ಮೇಲಿನ ಎಲ್ಲಾ ವಾಹನಗಳನ್ನು ಮೇಲೆ ತಿಳಿಸಿದ ಆಯಾ ಏಜೆನ್ಸಿಯ ಅಂಗಳದಲ್ಲಿ ನಿಲುಗಡೆ ಮಾಡಲಾಗುತ್ತದೆ. 6) ಆಸಕ್ತ ಬಿಡ್ಡರ್‌ಗಳು ಮೇಲೆ ಸೂಚಿಸಿರುವ ಸಂಬಂಧ ಪಟ್ಟ ಸ್ಥಳಗಳಿಗೆ ಭೇಟಿ ನೀಡಿ ವಾಹನಗಳನ್ನು ಪರಿಶೀಲಿಸಬಹುದು ಮತ್ತು ಅವರ ಬೆಲೆಯನ್ನು ನೀಡಬಹುದು (ಕನಿಷ್ಠ ಮೀಸಲು ಬೆಲೆಗಿಂತ ಹೆಚ್ಚಿಗೆ) 7) ಬಿಡ್ಡರ್‌ಗಳು ಬಿಡ್ಡಿಂಗ್ ಮೊತ್ತವನ್ನು ಮೀಸಲು ಬೆಲೆಗಿಂತ ಹೆಚ್ಚಿಗೆ **ರೂ. 5,000/- ಗಳ** ಗುಣಾಂಕದಲ್ಲಿ ಹೆಚ್ಚಿಸಬೇಕು. 8) ಯಶಸ್ವಿ ಬಿಡ್‌ದಾರರು ಬಾಕಿ ಉಳಿದ ಬಿಡ್ ಮೊತ್ತವನ್ನು 7 **ದಿನಗಳ ಒಳಗೆ** ಪಾವತಿಸಬೇಕು. ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 9) ಯಶಸ್ವಿ ಬಿಡ್‌ದಾರರು ಯಾವುದೇ ಕಾರಣಕ್ಕೆ ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲ. 10) ಬ್ಯಾಂಕ್ ಯಾವುದೇ ನೋಟೀಸನ್ನು ನೀಡದೆ ಮಾರಾಟವನ್ನು ರದ್ದುಗೊಳಿಸುವ / ಮುಂದೂಡುವ ಹಕ್ಕನ್ನು ಕಾಯ್ದಿರಿಸಿದೆ. 11) ಹೆಚ್ಚಿನ ವಿವರಗಳಿಗೆ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ಸಂಪರ್ಕಿಸುವ ಸಂಖ್ಯೆ : 080-25943007. ವಾಹನಗಳನ್ನು ಪರಿವೀಕ್ಷಿಸುವ ದಿನಾಂಕ : 22.01.2024 ಮತ್ತು 24.01.2024

ದಿನಾಂಕ: 19.01.2024, ಸ್ಥಳ: ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿಗಳು, ಭಾರತೀಯ ಸ್ಟೇಟ್ ಬ್ಯಾಂಕ್